**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ.,**
**ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 51/2023**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು

1. ಉಮೇಶ ಸಿದ್ದಪ್ಪ ಹಿತ್ತಲಮನಿ ಉರ್ಫ ಉಮ್ಯಾ
ವಯಾಃ 23 ವರ್ಷ, ಉಃ ಕೂಲಿಕೆಲಸ
ಸಾಃ ಕವಲಗೇರಿ ತಾಃ ಧಾರವಾಡ

2. ಬಾಲಕೃಷ್ಣ ಶಿವಮೂರ್ತಿ ಪಾಟೀಲ
ವಯಾಃ 34 ವರ್ಷ, ಉಃ ಕೂಲಿಕೆಲಸ
ಸಾಃ ಯಮಕನಮರಡಿ ತಾಃ ಹುಕ್ಕೇರಿ

**ದೋಷಾರೋಪಣೆ**

ಶ್ರೀ ಮಹೇಶ ಚಂದ್ರಕಾಂತ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಇಡುವ ದೋಷಾರೋಪಣೆಗಳೆಂದರೆ:-

ಮೊದಲನೆಯದಾಗಿ, ಪಿರ್ಯಾದಿ ಹಾಗೂ ಆತನ ಮಗಳಾದ ದೀಪಾ ಇವರು ಕೂಡಿಕೊಂಡು ತಮ್ಮ ಮೋಟಾರ ಸೈಕಲ್ ನಂ.ಕೆಎ-63/ಕ್ಯೂ-1851 ನೇದ್ದರಲ್ಲಿ ಗೋವಾದಿಂದ ಧಾರವಾಡಕ್ಕೆ ಬರುತ್ತಾ ಇದ್ದಾಗ ದಿನಾಂಕಃ 01.09.2022 ರಂದು ಬೆಳಗಿನ 01.40 ಗಂಟೆಯ ಸುಮಾರಿಗೆ ಆರೋಪಿತರಾದ ನೀವಿಬ್ಬರೂ ಮೋಟಾರ ಸೈಕಲ್ ಮೇಲೆ ಪ್ರಯಾಣಿಸುವ ಜನರಿಂದ ಹಣ ಸುಲಿಗೆ ಮಾಡುವ ಸಮಾನ ಉದ್ದೇಶದಿಂದ ನಿಮ್ಮ ಮೋಟಾರ ಸೈಕಲ್ ನಂ.ಕೆಎ-25 ಹೆಚ್ ಜಿ -1758 ನೇದ್ದರ ಮುಖಾಂತರ ನವಲೂರ ಬ್ರಿಡ್ಜ ಹತ್ತಿರ ನಿಂತಿದ್ದಾಗ ಪಿರ್ಯಾದುದಾರನ ಮೋಟಾರ ಸೈಕಲ್ ನಿಲ್ಲಿಸಿ ನಮ್ಮ ಸದರಿ ಮೋಟಾರ ಸೈಕಲ್ಗೆ ಪೆಟ್ರೋಲ ಖಾಲಿ ಆಗಿದೆ ಅಂತಾ ಅವರ ಹತ್ತಿರ ಪೆಟ್ರೋಲ್ ಪಡೆದುಕೊಂಡು ಅವರನ್ನು ಹಿಂಬಾಲಿಸುತ್ತಾ ಬಂದು ಪಿರ್ಯಾದಿದಾರರು ಹಾಗೂ ಆತನ ಮಗಳು ಉದಯಗಿರಿ ಸತ್ತೂರ ಡಬಲ್ ರೋಡದ ಮೇಲೆ ಹೊರಟಾಗ ಸದರಿ ಮೋಟಾರ ಸೈಕಲ್ನ್ನು ತಡೆದು ನಿಲ್ಲಿಸಿ ನಿಮ್ಮ ಗಾಡಿಯಿಂದ ಇಬ್ಬರೂ ಒಮ್ಮೇಲೆ ಇಳಿದು ದರೋಡೆ ಮಾಡಬೇಕೆನ್ನುವ ಉದ್ದೇಶದಿಂದ

ಪಿರ್ಯಾದಿದಾರ ಹಾಗೂ ಅವರ ಮಗಳ ಮೇಲೆ ಏರಿ ಹೋಗಿ ಸದರಿ ಗಾಡಿಗೆ ಒದ್ದು ಅವರನ್ನು ಗಾಡಿಯಿಂದ ಕೆಳಗೆ ಕೆಡವಿ ನಿಮ್ಮ ನಿಮ್ಮ ಕೈಗಳಿಂದ ಹೊಡೆದು ಒಂದು ಹಿಡಿ ಗಾತ್ರದ ಕಾಡು ಕಲ್ಲಿನಿಂದ ನೀನು 1 ನೇ ಆರೋಪಿ ಪಿರ್ಯಾದಿದಾರರ ತಲೆಗೆ ಹೊಡೆದು ಗಾಯಗೊಳಿಸಿ ನೀನು 2 ನೇ ಆರೋಪಿ ಪಿರ್ಯಾದಿದಾರರಳ ಮಗಳ ಹತ್ತಿರವಿದ್ದ ಸ್ಕೂಲ್ ಬ್ಯಾಗನ್ನು ಕಿತ್ತುಕೊಳ್ಳಲು ಹೋದಾಗ ಬಾಲಕಿಯು ತಪ್ಪಿಸಿಕೊಳ್ಳಲು ಹೋದಾಗ ಬಾಲಕಿಯ ಕೂದಲನ್ನು ಹಿಡಿದು ಎಳೆದು ಕೈ ಹಿಡಿದು ಏಳಿದಾಡಿ ಕೈಯಿಂದ ಅವಳಿಗೆ ಹೊಡೆದು ಗಾಯಗೊಳಿಸಿ ನೀವು ಭಾರತೀಯ ದಂಡ ಸಂಹಿತೆಯ ಕಲಂ **394** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಆರೋಪಿತರು ನಿಮ್ಮ ಸಮಾನ ಮನಸ್ಸಿನಿಂದ, ದರೋಡೆ ಮಾಡಬೇಕೆನ್ನುವ ಉದ್ದೇಶದಿಂದ ಪಿರ್ಯಾದಿದಾರ ಹಾಗೂ ಅವರ ಮಗಳಿಗೆ ಹೊಡೆದು ಗಾಯಗೊಳಿಸಿ ಹೆದರಿಸಿ ಸ್ಕೂಲ್ ಬ್ಯಾಗಿನಲ್ಲಿ ಇಟ್ಟಿದ್ದ ರೂ.20,000/- ನಗದು ಹಣವಿದ್ದ ಬ್ಯಾಗನ್ನು ಬಾಲಕಿಯಿಂದ ಕಸಿದುಕೊಂಡು ಸದರಿ ಹಣ ದೋಚಿಕೊಂಡು ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **392** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿಯಾದ ನೀನು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು.)

ಧಾರವಾಡ
ದಿನಾಂಕಃ

**(ಮಹೇಶ ಚಂದ್ರಕಾಂತ)**
**3** ನೇ ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಧಾರವಾಡ.

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ.,**
**ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 51/2023**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 1. ಉಮೇಶ ಸಿದ್ದಪ್ಪ ಹಿತ್ತಲಮನಿ ಉರ್ಫ ಉಮ್ಯಾ
ವಯಾಃ 23 ವರ್ಷ, ಉಃ ಕೂಲಿಕೆಲಸ
ಸಾಃ ಕವಲಗೇರಿ ತಾಃ ಧಾರವಾಡ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 51/2023**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 2. ಬಾಲಕೃಷ್ಣ ಶಿವಮೂರ್ತಿ ಪಾಟೀಲ
ವಯಾಃ 34 ವರ್ಷ, ಉಃ ಕೂಲಿಕೆಲಸ
ಸಾಃ ಯಮಕನಮರಡಿ ತಾಃ ಹುಕ್ಕೇರಿ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ